# ಸಾವಿರ ಕೋಟಿಯ ಸರದಾರರು!







ನೂರು ಕೋಟಿ ಕ್ಲಬ್ ಎನ್ನುವುದು ಬಾಲಿವುಡ್‌ನಲ್ಲಿ ನಿನ್ನೆ ಮೊನ್ನೆಯವರೆಗೆ ಪ್ರತಿಷ್ಠಿತ ಸಂಗತಿಯಾಗಿತ್ತು. ಸಿನಿಮಾವೊಂದು ಬಿಡುಗಡೆಯಾಗಿ ತಿಂಗಳೊಳಗೆ 100 ಕೋಟಿ ರೂಪಾಯಿ ಕಲೆಕ್ಷನ್ ದಾಟಿದರೆ ಅದೊಂದು ದೊಡ್ಡ ಸಾಧನೆ ಎಂದು ಬಿಂಬಿಸಲಾಗುತ್ತಿತ್ತು. ಅದು ಹಳತಾದ ಬಳಿಕ. ಚಿತ್ರವೊಂದು ಬಿಡುಗಡೆಯ ಮೊದಲ ವಾರದಲ್ಲೇ 400 ಕೋಟಿ ರೂಪಾಯಿ ಕಲೆಕ್ಷನ್ ಸಾಧಿಸುವ ಸಂಭ್ರಮ ಶುರುವಾಯಿತು. ಇಷ್ಟೆಲ್ಲ ದುಡ್ಡು ಬರಬೇಕಾದರೆ ಆ ಚಿತ್ರದ ನಿರ್ಮಾಣಕ್ಕೆ ಕನಿಷ್ಠ 200–300 ಕೋಟಿ ರೂಪಾಯಿ ಸುರಿಯುವ ಅಗತ್ಯವಂತೂ ಇತ್ತು. ಆದರೆ ಈಗ ಬಾಲಿವುಡ್ ಇನ್ನೊಂದು ಲಂಘನಕ್ಕೆ ಸಿದ್ಧವಾಗಿದೆ. ಅದು ಸಾವಿರ ಕೋಟಿ ರೂಪಾಯಿಗಳ ಸಿನಿಮಾ!

ಇದು ಶುರುವಾದದ್ದು ರಾಜಮೌಳಿ ನಿರ್ದೇಶನದ ಬಾಹುಬಲಿಯಿಂದ. ಭಾರತದ ಬೆಳ್ಳಿತೆರೆಯಲ್ಲೇ ಮೊದಲ ಬಾರಿಗೆ 500 ಕೋಟಿ ರೂಪಾಯಿ ಸುರಿದು ನಿರ್ಮಿಸಿದ ಚಿತ್ರವದು. ಬಾಹುಬಲಿ–1 ಮತ್ತು ಬಾಹುಬಲಿ–2 ಎರಡೂ ಹೀಗೆ ಸುರಿದ ಹಣವನ್ನು ತಿಂಗಳೊಪ್ಪತ್ತಿನಲ್ಲೇ ಮರಳಿ ಗಳಿಸಿದವು. ಅದೀಗ ಹೊಸ ಸಾಹಸಕ್ಕೆ ಪ್ರೇರಣೆ ನೀಡಿದೆ.

ಅಮೀರ್ ಖಾನ್ ಮುಂದಿನ ಚಿತ್ರದ ಬಜೆಟ್ 1000 ಕೋಟಿ ರೂಪಾಯಿಯಂತೆ! ಮಹಾಭಾರತದ ಕಥೆಯನ್ನು ಸಿನಿಮಾ ಮಾಡಲು ಹೊರಟಿರುವ ಅಮೀರ್‌ಖಾನ್ ಅದಕ್ಕಾಗಿ ಉದ್ಯಮಿ ಮುಖೇಶ್ ಅಂಬಾನಿ ಅವರನ್ನೂ ನಿರ್ಮಾಪಕರಾಗಲು ಒಪ್ಪಿಸಿದ್ದಾರಂತೆ. 'ಮಹಾಭಾರತದ ಕಥೆಯನ್ನು ಬೆಳ್ಳಿತೆರೆಗೆ ತರಬೇಕು ಎನ್ನುವುದು ನನ್ನ ಜೀವನದ ಬಹುದೊಡ್ಡ ಕನಸು. ಆದರೆ ಈ ಕಥೆ ಎಷ್ಟೊಂದು ಬೃಹತ್ ಇದೆಯೆಂದರೆ, ನನ್ನ ಜೀವನದ ಹತ್ತಿಪ್ಪತ್ತು ವರ್ಷಗಳು ಅದಕ್ಕೇ ಹೋಗಬಹುದೇನೋ! ಮಹಾಭಾರತದಲ್ಲಿ ಕರ್ಣನ ಪಾತ್ರ ಮಾಡಬೇಕು ಎನ್ನುವುದು ನನ್ನ ಮಹದಾಸೆ. ಆದರೆ ನನ್ನ ದೇಹದಾರ್ಢ್ಯ ಆ ಪಾತ್ರಕ್ಕೆ ಹೊಂದುವುದಿಲ್ಲ. ಬಹುಶಃ ನಾನು ಕೃಷ್ಣನ ಪಾತ್ರ ಮಾಡಬಹುದು. ಅರ್ಜುನನ ಪಾತ್ರವೂ ನನಗೆ ಇಷ್ಟವೇ. ನೋಡೋಣ' ಎಂದಿದ್ದಾನೆ ಅಮೀರ್ ಖಾನ್.

1000 ಕೋಟಿ ರೂಪಾಯಿಯ ಈ ಭಾರೀ ಚಿತ್ರಕ್ಕೆ ನಿರ್ದೇಶನ ಮಾಡಲು ರಾಜಮೌಳಿಯನ್ನು ಕರೆ ತರಬಹುದೆ.. ಎನ್ನುವ ಪ್ರಶ್ನೆಯೀಗ ಚರ್ಚೆಯಲ್ಲಿದೆ. ಕೆಲವು ತಿಂಗಳ ಹಿಂದೆ, ರಾಜಮೌಳಿಯೇ ಮಹಾಭಾರತ ಕಥೆಯ ಸಿನಿಮಾ ಮಾಡೋದಕ್ಕೆ ಅಮಿತಾಭ್ ಬಚ್ಚನ್, ಐಶ್ವರ್ಯ ರೈ ಮತ್ತು ಅಮೀರ್ ಖಾನ್‌ರನ್ನು ಸಂಪರ್ಕಿಸಿದ್ದಾರೆ ಎಂಬ ಸುದ್ದಿ ಬಂದಿತ್ತು. ಅಮಿತಾಭ್ ಭೀಷ್ಮನ ಪಾತ್ರವನ್ನೂ, ಅಮೀರ್ ಅರ್ಜುನನ ಪಾತ್ರವನ್ನೂ, ಕತ್ರೀನಾ ದ್ರೌಪದಿಯ ಪಾತ್ರವನ್ನೂ ನಿರ್ವಹಿಸಲಿದ್ದಾರೆ ಎನ್ನುವುದು ದೊಡ್ಡ ಸುದ್ದಿಯಾಗಿತ್ತು. ಆದರೆ ರಾಜಮೌಳಿ ಆ ಸುದ್ದಿಯನ್ನು ಸಾರಾಸಗಟಾಗಿ ತಳ್ಳಿ ಹಾಕಿದ್ದರು.

ಇದರ ಮಧ್ಯೆ ಮಹಾಭಾರತದ ಕಥೆಯನ್ನು ಇಟ್ಟುಕೊಂಡು 1000 ಕೋಟಿ ರೂಪಾಯಿ ವೆಚ್ಚದ ಸಿನಿಮಾವೊಂದನ್ನು ಮಲಯಾಳಂ ಸೂಪರ್‌ಸ್ಟಾರ್ ಮೋಹನ್‌ಲಾಲ್ ಅವರು ನಿರ್ಮಿಸುವ ಸುದ್ದಿಯೂ ಹೊರಬಿದ್ದಿದೆ. ಈಗಾಗಲೆ ಈ ಚಿತ್ರಕ್ಕಾಗಿ ಅಮಿತಾಭ್ ಬಚ್ಚನ್ ಮತ್ತು ಐಶ್ವರ್ಯ ರೈ ಅವರನ್ನು ಮೋಹನ್‌ಲಾಲ್ ಭೇಟಿಯಾಗಿ ಒಪ್ಪಿಸಿದ್ದಾರಂತೆ. ಈ ಚಿತ್ರಕ್ಕೆ ಎಂ.ಟಿ.ವಾಸುದೇವನ್ ನಾಯರ್ ಅವರು ಬರೆದ ಮಹಾಭಾರತ ಆಧಾರಿತ 'ರಂದಾಮೂಲಂ' ಕಥೆಯನ್ನೇ ಮೋಹನ್‌ಲಾಲ್ ವಿಸ್ತರಿಸಿದ್ದಾರೆ. ಇದರಲ್ಲಿ ಭೀಷ್ಮನ ಪಾತ್ರದ ಮೂಲಕ ಮಹಾಭಾರತವನ್ನು ನೋಡಲಾಗಿದೆ. ಈ ಚಿತ್ರದಲ್ಲಿ ಕರ್ಣನ ಪಾತ್ರಕ್ಕೆ ತೆಲುಗಿನ ಸೂಪರ್‌ಸ್ಟಾರ್ ನಾಗಾರ್ಜುನ ಆಯ್ಕೆಯಾಗಿದ್ದು, ಈ ವರ್ಷ ಸೆಪ್ಟೆಂಬರ್‌ನಲ್ಲಿ ಶೂಟಿಂಗ್ ಶುರುವಾಗಲಿದೆ. ಹಿಂದಿ, ಇಂಗ್ಲಿಷ್, ತಮಿಳು, ಕನ್ನಡ, ತೆಲುಗು ಮತ್ತು ಮಲಯಾಳಂ ಹೀಗೆ ಆರು ಭಾಷೆಗಳಲ್ಲಿ ಈ ಚಿತ್ರ ಸಿದ್ಧವಾಗಲಿದೆ. 2020ರ ಹೊತ್ತಿಗೆ ಸಿನಿಮಾ ಸಿದ್ಧವಾಗಬಹುದು ಎಂದು ನಿರ್ಮಾಪಕರು ಕ್ಲೂ ಕೊಟ್ಟಿದ್ದಾರೆ.

■ ಬಿಂದು